ನಾಮಸಂಕೀರ್ತನಯೋಗ : ಖಂಡ ೨

# ಯಾವ ನಾಮಜಪ ಮಾಡಬೇಕು ?

**(ನಾಮಜಪದಿಂದಾಗುವ ಪರಿಣಾಮಗಳ ವಿವೇಚನೆ ಸಹಿತ)**

(Which Deity's Name should we chant ?)

ಕನ್ನಡ (Kannada)


**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

('ಸಚ್ಚಿದಾನಂದ ಪರಬ್ರಹ್ಮ' ಬಿರುದಿನ ಸ್ಪಷ್ಟೀಕರಣವನ್ನು 'ಪುಟ ೯' ರಲ್ಲಿ ಓದಿ.)

**ಪೂ. ಸಂದೀಪ ಗಜಾನನ ಆಳಶಿ**



**ಸನಾತನ ಸಂಸ್ಥೆ**


**ಡಿಸೆಂಬರ್ ೨೦೨೨ ರವರೆಗೆ ಸನಾತನದ ೩೬೦ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೨,೧೧,೦೦೦ ಪ್ರತಿಗಳು !**

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಶ್ರೀ. ಅಜಯ ಪಿಂಗಳೆ ಮತ್ತು ಸೌ. ಅನಘಾ ಟಂಕಸಾಳೆ

**First Edition** : Narakachaturdashi, Kaliyug Varsh 5118
(29th October 2016)

**Third Edition** : Shanaishchara Jayanti, Kaliyug Varsh 5121
(3rd June 2019)

**Third Reprint** : Rathasaptami, Kaliyug Varsh 5124
(28th January 2023)

Translated from the original Marathi text 'Namjap konta karava ?'
ಪ್ರಸ್ತುತ ಗ್ರಂಥವು ಹಿಂದಿ ಮತ್ತು ತಮಿಳು ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಸೌ. ಪ್ರತೀಕಾ ಸಂತೋಷ ಪೈ
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 75/-

**ISBN :** 978-93-87641-63-1 ಗ್ರಂಥ ಕ್ರ. : 283

**© ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

# ವಿಷಯಸೂಚಿ

೧. ಗ್ರಂಥದ ಸಂಕಲನಕಾರರ ಪರಿಚಯ ೫

೨. ಮನೋಗತ ೭

## ಗ್ರಂಥದ ಅನುಕ್ರಮಣಿಕೆ

೧. ಪ್ರಾಥಮಿಕ ಅವಸ್ಥೆಯಲ್ಲಿನ ಸಾಧಕನಿಗೆ ಈಶ್ವರನ ನಿರ್ಗುಣ ರೂಪದ ವಾಚಕವಾದ ಓಂ' ಜಪವನ್ನು ಭಕ್ತಿಭಾವದಿಂದ ಮಾಡುವುದರಲ್ಲಿನ ಕಠಿಣತೆ ೧೦

೨. ಕೆಟ್ಟ ಶಕ್ತಿಗಳಿಂದಾಗುವ ತೊಂದರೆಗಳ ನಿವಾರಣೆ ಮತ್ತು ಆಧ್ಯಾತ್ಮಿಕ ಉನ್ನತಿಗಾಗಿ ಯಾವ ನಾಮಜಪ ಮತ್ತು ಉಪಾಯಗಳನ್ನು ಮಾಡಬೇಕು ? ೧೧

೩. ಉದ್ದೇಶಕ್ಕನುಸಾರ ನಾಮಜಪ ಮಾಡುವುದು ೪೭

೪. ಯಾವ ನಾಮಜಪ ಮಾಡಬಾರದು ? ೫೬

೫. ಕೆಲವು ಸಂತರು, ಮುನಿಗಳು ಮತ್ತು ಭಕ್ತರು ಮಾಡುತ್ತಿರುವ ನಾಮಜಪ ೫೯

೬. ಸಾಂಪ್ರದಾಯಿಕ ನಾಮಜಪ ೬೦

೭. ಪ್ರಾಂತ್ಯ ಮತ್ತು ಭಾಷೆಗನುಸಾರ ನಾಮಜಪ ೬೪

೮. ಕೆಲವು ಪಂಥಗಳಲ್ಲಿನ ನಾಮಜಪ ೬೪

೯. ನಾಮದ ಅರ್ಥಕ್ಕನುಸಾರ ಆಗುವ ಪರಿಣಾಮಗಳು ೬೬

೧೦. ವಿವಿಧ ನಾಮಗಳು ವಿವಿಧ ದೇಹಗಳ ಸ್ಪಂದನಸಂಖ್ಯೆಗಳೊಂದಿಗೆ ಹೊಂದಾಣಿಕೆಯಾಗುವುದು ಮತ್ತು ಪರಮೇಶ್ವರನೊಂದಿಗೆ ಏಕರೂಪಗೊಳಿಸುವ ಅವುಗಳ ಕ್ಷಮತೆ ೬೬

೧೧. ಕೆಲವು ದೇವತೆಗಳ ನಾಮದ ಪರಿಣಾಮ ೬೭

೧೨. ನಾಮಜಪದಿಂದ ಕೆಲವೊಮ್ಮೆ ತೊಂದರೆಯಾಗುವುದು ೭೦

೧೩. ನಾಮಸ್ಮರಣೆಯಿಂದ ಆಗಬಹುದಾದ ಹಾನಿ ಮತ್ತು ಅದರ ಮೇಲಿನ ಉಪಾಯ ೭೨

卐 'ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ' ಮತ್ತು ಇತರ ಮಾಹಿತಿ ೭೩

## ವಿಷಯಸೂಚಿಯಲ್ಲಿನ ಕ್ರಮಾಂಕ ೨

# ಮನೋಗತ

ಅನೇಕ ಸಂತರು 'ಕಲಿಯುಗದಲ್ಲಿ ಈಶ್ವರಪ್ರಾಪ್ತಿ ಮಾಡಿಕೊಳ್ಳಲು ನಾಮಜಪವು ಸರ್ವೋತ್ತಮ ಸಾಧನವಾಗಿದೆ', ಎಂದು ಹೇಳಿದ್ದಾರೆ. ಕಾಲಮಹಾತ್ಮೆಗನುಸಾರ ಸದ್ಯದ ಸೂಕ್ಷ್ಮದಲ್ಲಿನ ಆಪತ್ಕಾಲದಲ್ಲಿ ಕೆಟ್ಟ ಶಕ್ತಿಗಳ ತೊಂದರೆಗಳ ಪ್ರಮಾಣವು ಬಹಳ ಹೆಚ್ಚಾಗಿದೆ. ಸಾಧಾರಣ ಪ್ರತಿಯೊಬ್ಬ ವ್ಯಕ್ತಿಗೂ ಹೆಚ್ಚು-ಕಡಿಮೆ ಪ್ರಮಾಣದಲ್ಲಿ ಕೆಟ್ಟ ಶಕ್ತಿಗಳ ತೊಂದರೆಯಾಗುತ್ತಿದೆ. ಈ ತೊಂದರೆಗಳಿಂದ ಮನುಷ್ಯನ ಜೀವನವು ಸಂಕಟ ಮತ್ತು ದುಃಖಮಯವಂತೂ ಆಗುತ್ತದೆ, ಅಲ್ಲದೇ ಅವನ ಸಾಧನೆಯೂ ಸರಿಯಾಗಿ ಆಗುವುದಿಲ್ಲ. ಇದಕ್ಕಾಗಿ ಪ್ರಾಧಾನ್ಯತೆಯಿಂದ ಕೆಟ್ಟ ಶಕ್ತಿಗಳ ತೊಂದರೆಗಳ ನಿವಾರಣೆಗಾಗಿ ನಾಮಜಪವನ್ನು ಮಾಡುವುದು ಆವಶ್ಯಕವಾಗಿದೆ. ಕೆಟ್ಟ ಶಕ್ತಿಗಳ ತೊಂದರೆಗಳ ನಿವಾರಣೆಗಾಗಿ ನಾಮಜಪ ಮಾಡಿ ಉಳಿದ ಸಮಯದಲ್ಲಿ ಆಧ್ಯಾತ್ಮಿಕ ಉನ್ನತಿಗಾಗಿ ನಾಮಜಪ ಮಾಡುವುದು ಯೋಗ್ಯವಾಗಿದೆ.

ಕೆಲವರು ಕೆಲವು ವರ್ಷ ಪ್ರಯತ್ನ ಪೂರ್ವವಾಗಿ ನಾಮಜಪ ಮಾಡಲು ಪ್ರಯತ್ನಿಸು ತ್ತಾರೆ. ಹೀಗೆ ಮಾಡಿದರೂ ಅನುಭೂತಿಗಳು ಬರದೇ ಇದ್ದಾಗ ಅವರಿಗೆ 'ನಾಮದಲ್ಲೇನೂ ಅರ್ಥವಿಲ್ಲ' ಎಂದೆನಿಸುತ್ತದೆ. ಆಮೇಲೆ ಅಧ್ಯಾತ್ಮದ ಮೇಲಿನ ಅವರ ವಿಶ್ವಾಸವೇ ಕಡಿಮೆಯಾಗುತ್ತದೆ. ಅವರಿಗೆ, 'ನಾಮಜಪದಲ್ಲಿ ದೋಷವಿಲ್ಲ, ನಾವು ಆರಿಸಿಕೊಂಡ ನಾಮಜಪ ನಮ್ಮ ಆಧ್ಯಾತ್ಮಿಕ ಉನ್ನತಿಗೆ ಪೂರಕವಾಗಿಲ್ಲ', ಆದುದರಿಂದ ಆ ನಾಮಜಪದಿಂದ ಅನುಭೂತಿಗಳು ಬರುವುದಿಲ್ಲ ಎಂಬುದು ತಿಳಿಯುವುದಿಲ್ಲ; 'ವ್ಯಕ್ತಿಗಳಷ್ಟು ಪ್ರಕೃತಿಗಳು ಮತ್ತು ಅಷ್ಟೇ ಸಾಧನಾಮಾರ್ಗಗಳು' ಎಂಬ ಅಧ್ಯಾತ್ಮದ ಸಿದ್ಧಾಂತಕ್ಕನುಸಾರ ಯಾರು ಯಾವ ನಾಮಜಪವನ್ನು ಜಪಿಸಬೇಕು ಎಂಬುದನ್ನು ಗಮನದಲ್ಲಿಡಬೇಕು. ಇದು ಸರ್ವಸಾಮಾನ್ಯರಿಗೆ ತಿಳಿಯಬೇಕೆಂಬುದೇ ಈ ಗ್ರಂಥದ ಉದ್ದೇಶವಾಗಿದೆ.

ಗುರುಗಳು ಅಥವಾ ಅಧ್ಯಾತ್ಮದ ಅಧಿಕಾರಿ ವ್ಯಕ್ತಿಗಳು ಯಾವುದಾದರೊಂದು ನಾಮವನ್ನು ಜಪಿಸಲು ಹೇಳಿದರೆ ಅದನ್ನು ಸಂಪೂರ್ಣ ಶ್ರದ್ಧೆಯಿಂದ ಜಪಿಸಬೇಕು; ಏಕೆಂದರೆ ಆ ನಾಮಜಪವು ಆ ವ್ಯಕ್ತಿಯ ಹಿತಕ್ಕಾಗಿಯೇ ಇರುತ್ತದೆ; ಆದರೆ 'ಹಾಗೆ ಹೇಳುವ ಯಾವ ವ್ಯಕ್ತಿಯೂ ನಮ್ಮ ಜೀವನದಲ್ಲಿ ಬರದಿದ್ದರೆ ಯಾವ ನಾಮಜಪ ಮಾಡಬೇಕು ?' ಎಂದು ಸಾಮಾನ್ಯರಿಗೆ ಪ್ರಶ್ನೆ ಬರುವುದು ಸಹಜವಾಗಿದೆ. ಅವರಿಗೆ ಈ ಗ್ರಂಥದಿಂದ ಮಾರ್ಗದರ್ಶನ ದೊರೆಯುವುದು.

ಈ ಗ್ರಂಥದಲ್ಲಿ ಸಾಧಕರ ಸಾಧನೆಯ ವರ್ಷಗಳು, ಅವರಲ್ಲಿ ಸಾಧಕತ್ವ ನಿರ್ಮಾಣವಾಗಿರುವುದು ಅಥವಾ ನಿರ್ಮಾಣವಾಗದಿರುವುದು ಮತ್ತು ಅವರು ಸಮಷ್ಟಿ ಸಾಧನೆಯನ್ನು (ಉದಾ. ಅಧ್ಯಾತ್ಮಪ್ರಸಾರದ ಸೇವೆಯನ್ನು) ಮಾಡುವುದು ಅಥವಾ ಮಾಡದಿರುವುದು ಇತ್ಯಾದಿ ಘಟಕಗಳಿಗನುಸಾರ ಸಾಧಕರ ಸಾಧನೆಯ ಆಯಾ ಹಂತಗಳಿಗನುಸಾರ ಅವರು ಯಾವ ನಾಮಜಪ ಮಾಡಬೇಕು ಎಂಬುದನ್ನೂ ಹೇಳಲಾಗಿದೆ. ನಾಮಜಪದ ಜೊತೆಗೆ ಮುದ್ರೆ ಮತ್ತು ನ್ಯಾಸಗಳನ್ನು ಮಾಡುವುದು, ಹಾಗೆಯೇ ಸ್ವಭಾವದೋಷ ಮತ್ತು ಅಹಂ ನಿರ್ಮೂಲನೆಗಾಗಿ 'ಸ್ವಯಂಸೂಚನೆ'ಗಳನ್ನು ನೀಡುವುದು ಲಾಭಕಾರಿಯಾಗಿರುವುದರ ಹಿಂದಿನ ಶಾಸ್ತ್ರವನ್ನೂ ಸ್ಪಷ್ಟಪಡಿಸಲಾಗಿದೆ. ಯಾವ ನಾಮಜಪ ಮಾಡಬಾರದು, 'ಓಂ' ನ ನಾಮಜಪವನ್ನು ಯಾರು ಮಾಡಬೇಕು, ನಾಮಜಪದಿಂದ ಆಗುವ ಪರಿಣಾಮಗಳು ಇತ್ಯಾದಿ ಮಾಹಿತಿಗಳನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ.

'ಈ ಗ್ರಂಥವನ್ನು ಓದಿ ಆವಶ್ಯಕ ನಾಮಜಪವನ್ನು ಮಾಡಿ ಎಲ್ಲರ ಶೀಘ್ರ ಆಧ್ಯಾತ್ಮಿಕ ಉನ್ನತಿಯಾಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

## ಜ್ಞಾನ ಸಿಗುವ ಸಾಧಕರ ನಮ್ರತೆ !

'ದೊರೆಯುತ್ತಿರುವ ಜ್ಞಾನವು ನನ್ನದಾಗಿರದೇ ಸಾಕ್ಷಾತ್ ಈಶ್ವರನ ಜ್ಞಾನವಾಗಿದೆ' ಎಂಬುದು ಸಾಧಕ ಅಥವಾ ಸಂತರ ಭಾವವಾಗಿರುತ್ತದೆ. ಅಹಂಕಾರ ಹೆಚ್ಚಾಗಬಾರದೆಂದು ಅವರು ಜ್ಞಾನದ ಕೊನೆಯಲ್ಲಿ ತಮ್ಮ ಹೆಸರು ಬರೆಯದೇ ತಮ್ಮ ಶ್ರದ್ಧಾಸ್ಥಾನದ ಹೆಸರು ಬರೆಯುತ್ತಾರೆ ಮತ್ತು ಕಂಸದಲ್ಲಿ ತಾವು ಮಾಧ್ಯಮವಾಗಿರುವುದನ್ನು ಬರೆಯುತ್ತಾರೆ, ಉದಾ. ಸೂಕ್ಷ್ಮಜಗತ್ತಿನ 'ಓರ್ವ ವಿದ್ವಾಂಸ' (ಸೌ. ಅಂಜಲಿ ಗಾಡಗೀಳರ ಮಾಧ್ಯಮ ದಿಂದ). ಅವರಿಗೆ ಸೂಕ್ಷ್ಮಜಗತ್ತಿನ 'ಓರ್ವ ವಿದ್ವಾಂಸರು' ಜ್ಞಾನ ಕೊಡುತ್ತಾರೆ ಎಂಬುದು ಸೌ. ಅಂಜಲಿ ಗಾಡಗೀಳರ ಭಾವವಾಗಿರುತ್ತದೆ. ಯಾವುದಾದರೊಂದು ವಿಷಯದ ಬಗ್ಗೆ ಬರೆಯುವಾಗ ತ್ರಾಸದಾಯಕವೆನಿಸಿದರೆ ಅವರು ಜ್ಞಾನದ ಕೊನೆಯಲ್ಲಿ ತಮ್ಮ ಹೆಸರು ಬರೆಯದೇ 'ಓರ್ವ ಮಾಂತ್ರಿಕ' ಈ ರೀತಿಯಲ್ಲಿ ಬರೆಯುತ್ತಾರೆ ಮತ್ತು ಕಂಸದಲ್ಲಿ ಸ್ವತಃ ಮಾಧ್ಯಮವಾಗಿರುವುದನ್ನು ಬರೆಯುತ್ತಾರೆ.

**ಚಿರಂತನ ಆನಂದಪ್ರಾಪ್ತಿಯ ಮಾರ್ಗ ತೋರುವ ಸನಾತನದ ಗ್ರಂಥ-ಕಿರುಗ್ರಂಥ**

**ಪ್ರಾರ್ಥನೆ** (ಮಹತ್ವ ಮತ್ತು ಉದಾಹರಣೆಗಳು)